# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2285

ಸದಸ್ಯರ ಹೆಸರು : ಡಾ|| ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ)

ಉತ್ತರಿಸುವವರು : ಮಾನ್ಯ ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು.

ಉತ್ತರಿಸಬೇಕಾದ ದಿನಾಂಕ : 26/03/2021

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕೇಂದ್ರ ಸರ್ಕಾರದ "ಪ್ರಧಾನ ಮಂತ್ರಿ ಮಾತೃವಂದನ ಯೋಜನೆ"ಯನ್ನು (ಪಿ.ಎಂ.ಎಂ.ವಿ.ವೈ) ಕರ್ನಾಟಕ ರಾಜ್ಯದಲ್ಲಿ ಜಾರಿಗೊಳಿಸಲಾಗಿದೆಯೇ; ಇದ್ದರೆ ಅದರ ವಿವರಗಳನ್ನು ಮತ್ತು ರೂಪುರೇಷೆಗಳನ್ನು ನೀಡುವುದು. | ಕೇಂದ್ರ ಸರ್ಕಾರದ "ಪ್ರಧಾನ ಮಂತ್ರಿ ಮಾತೃವಂದನಾ ಯೋಜನೆ" (PMMVY) ಯನ್ನು ಕರ್ನಾಟಕ ರಾಜ್ಯದಲ್ಲಿ 01-01-2017 ರಿಂದ ಜಾರಿಗೊಳಿಸಲಾಗಿದೆ.<br><br>**ಯೋಜನೆಯ ಉದ್ದೇಶಗಳು:**<br><br>ಈ ಯೋಜನೆಯು 60:40 ಕೇಂದ್ರ:ರಾಜ್ಯ ಸರ್ಕಾರದ ಧನ ಸಹಾಯ ಯೋಜನೆಯಾಗಿದೆ. 0-6 ತಿಂಗಳಿನವರೆಗೆ ಕೇವಲ ತಾಯಿ ಎದೆ ಹಾಲುಣಿಸುವುದು, ಹೆರಿಗೆಯಾದ ಒಂದು ಗಂಟೆಯೊಳಗೆ ಎದೆ ಹಾಲುಣಿಸುವುದು ಹಾಗೂ ಅತಿ ಸಣ್ಣ ಮಕ್ಕಳಿಗೆ ಎದೆ ಹಾಲುಣಿಸುವ ಅಭ್ಯಾಸಗಳನ್ನು (IYCF) ಬೆಳೆಸಿಕೊಳ್ಳುವ ಬಗ್ಗೆ ಮಹಿಳೆಯರನ್ನು ಪ್ರೋತ್ಸಾಹಿಸುವುದು ಹಾಗೂ ಗರ್ಭಿಣಿಯರಿಗೆ ಬಾಣಂತಿಯರಿಗೆ ಆರೋಗ್ಯ ಮಟ್ಟವನ್ನು ಸುಧಾರಿಸುವ ನಿಟ್ಟಿನಲ್ಲಿ ಉತ್ತಮ ವಾತಾವರಣ ಸೃಷ್ಟಿಸಲು ನಗದು ರೂಪದಲ್ಲಿ ಪ್ರೋತ್ಸಾಹ ನೀಡುವುದು.<br><br>**ಯೋಜನೆಯಡಿ ಒದಗಿಸುವ ಸೌಲಭ್ಯಗಳು:**<br><br>• ಇದು ಕೇಂದ್ರ ಸರ್ಕಾರದ ಯೋಜನೆಯಾಗಿದ್ದು, ಗರ್ಭಿಣಿ/ಬಾಣಂತಿ ಮಹಿಳೆಯರಿಗೆ ರೂ.5000/-ಗಳ ಸಹಾಯಧನವನ್ನು ಮೂರು ಕಂತುಗಳಲ್ಲಿ ನೇರ ನಗದು ವರ್ಗಾವಣೆ ಮೂಲಕ ಫಲಾನುಭವಿಯ ಖಾತೆಗೆ ವರ್ಗಾಯಿಸಲಾಗುವುದು.<br><br>**1 ನೇ ಕಂತು**: ರೂ.1000/-ಗಳನ್ನು ಗರ್ಭಿಣಿ ಎಂದು ಅಂಗನವಾಡಿ ಕೇಂದ್ರಗಳಲ್ಲಿ ನೋಂದಣಿಯಾದಾಗ (150 ದಿನಗಳೊಳಗಾಗಿ) ವರ್ಗಾಯಿಸಲಾಗುವುದು.<br><br>**2 ನೇ ಕಂತು:** ರೂ. 2000/-ಗಳನ್ನು ಕನಿಷ್ಠ ಒಂದು ಆರೋಗ್ಯ ತಪಾಸಣೆ ಕೈಗೊಂಡಾಗ (ಗರ್ಭಿಣಿಯಾಗಿ 6ತಿಂಗಳ ನಂತರ) ವರ್ಗಾಯಿಸಲಾಗುವುದು.<br><br>**3 ನೇ ಕಂತು**: ರೂ.2000/-ಗಳನ್ನು ಮಗುವಿನ ಜನನದ ನಂತರ ಜನನ ನೋಂದಣಿ ಮತ್ತು ಮೊದಲನೇ ಹಂತದ ಚುಚ್ಚುಮದ್ದು (OPV, BCG, DPT, Hepatitis-B ಅಥವಾ ಬದಲಿ ಲಸಿಕೆಯನ್ನು ಪಡೆದಲ್ಲಿ) ಪಡೆದ ನಂತರ ವರ್ಗಾಯಿಸಲಾಗುವುದು. |

<table>
<tr><td></td><td></td><td>ಯೋಜನೆಯ ಫಲಾನುಭವಿಗಳು:<br><br>• ಸದರಿ ಯೋಜನೆಯ ಸೌಲಭ್ಯವು ಮೊದಲ ಜೀವಂತ ಹೆರಿಗೆಗೆ ಮಾತ್ರ ಸೀಮಿತವಾಗಿರುತ್ತದೆ.<br>• ಕೇಂದ್ರ / ರಾಜ್ಯ ಸರ್ಕಾರಿ ನೌಕರರು ಹಾಗೂ ಸಾರ್ವಜನಿಕ ಉದ್ದಿಮೆಗಳ ನೌಕರರನ್ನು ಹೊರತು ಪಡಿಸಿ ರಾಜ್ಯದ ಎಲ್ಲಾ ಗರ್ಭಿಣಿ ಮತ್ತು ಬಾಣಂತಿಯರು, ಈ ಸೌಲಭ್ಯವನ್ನು ಪಡೆಯಲು ಅರ್ಹರಾಗಿರುತ್ತಾರೆ.<br><br>ದಿನಾಂಕ:1-1-2017 ರಿಂದ ದಿನಾಂಕ:19-03-2021 ರವರೆಗೆ ಒಟ್ಟು 1307811 ಫಲಾನುಭವಿಗಳು ನೊಂದಣಿಯಾಗಿರುತ್ತಾರೆ. ಅದರಲ್ಲಿ 1263619 ಫಲಾನುಭವಿಗಳಿಗೆ ರೂ.49280.30 ಲಕ್ಷಗಳನ್ನು ಸಹಾಯಧನವನ್ನು ಫಲಾನುಭವಿಗಳ ಖಾತೆಗೆ ನೇರವಾಗಿ ಜಮೆ ಮಾಡಲಾಗಿರುತ್ತದೆ.</td></tr>
<tr><td>ಆ)</td><td>ಈ ಯೋಜನೆಗಳ ಮಾರ್ಗಸೂಚಿಯಂತೆ, ಈ ಯೋಜನೆ ಆರಂಭದಿಂದ ತಹಲ್ ವರೆವಿಗೂ ಎಷ್ಟು ತಾಯಿ ಮಕ್ಕಳ ರಕ್ಷಣೆ ಕಾರ್ಡ್(ಎಂ.ಸಿ.ಪಿ)ಗಳನ್ನು ವಿತರಿಸಲಾಗಿದೆ;</td><td>ತಾಯಿ ಮಕ್ಕಳ ರಕ್ಷಣೆ ಕಾರ್ಡ್ (ಎಂ.ಸಿ.ಪಿ) ವಿತರಿಸಿದ ವಿವರ ಕೆಳಕಂಡಂತಿವೆ:-<table>
<tr><th>ವರ್ಷ</th><th>ಫಲಾನುಭವಿಗಳ ಸಂಖ್ಯೆ</th></tr>
<tr><td>2017 ಜನವರಿ ಯಿಂದ ಮಾರ್ಚ್</td><td>2,32,333</td></tr>
<tr><td>2017-18</td><td>10,06,740</td></tr>
<tr><td>2018-19</td><td>11,18,095</td></tr>
<tr><td>2019-20</td><td>10,48,996</td></tr>
<tr><td>2020-2021(09.03.2021 ರವರೆಗೆ)</td><td>9,08,106</td></tr>
</table><br>ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಲಾಗಿದೆ.</td></tr>
<tr><td>ಇ)</td><td>ಈ ಕಾರ್ಡ್‌ಗಳನ್ನು ವಿತರಿಸಲು ಸರ್ಕಾರ ನಿಗಧಿಪಡಿಸಿರುವ ಕಾಲಾವಧಿ ಎಷ್ಟು ಮತ್ತು ಕಾರ್ಡ್‌ಗಳನ್ನು ಅಪೇಕ್ಷಿಸಿ ಬಂದಿರುವ ಅರ್ಜಿಗಳನ್ನು ಪರಿಶೀಲಿಸುವ ಮತ್ತು ವಿಲೇವಾರಿ ಮಾಡುವ ಪ್ರಕ್ರಿಯೆಗೆ ತೆಗೆದುಕೊಂಡಿರುವ ಕಾಲಾವಧಿ ಎಷ್ಟು; ಬಾಕಿ ಉಳಿದಿರುವ ಪ್ರಕರಣಗಳೆಷ್ಟು? (ಜಿಲ್ಲಾವಾರು ವಿವರವನ್ನು ನೀಡುವುದು)</td><td>ತಾಯಿ ಕಾರ್ಡ್ (MCP)ಗಳನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವತಿಯಿಂದ ನೀಡಲಾಗುತ್ತಿದ್ದು, ಅರ್ಹ ಫಲಾನುಭವಿಯು ಆರೋಗ್ಯ ಉಪ ಕೇಂದ್ರ ಅಥವಾ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕಿರಿಯ ಆರೋಗ್ಯ ಮಹಿಳಾ ಸಹಾಯಕಿಯರಿಂದ ಪಡೆಯಬಹುದಾಗಿರುತ್ತದೆ ಹಾಗೂ ಈ ತಾಯಿ ಕಾರ್ಡ್‌ಗಳನ್ನು ನೋಂದಣಿ ಸಮಯದಲ್ಲಿ ವಿತರಿಸಲಾಗುವುದು ಮತ್ತು ತಾಯಿ ಕಾರ್ಡ್‌ಗಳನ್ನು ಪಡೆಯಲು ಅರ್ಜಿಯನ್ನು ಸಲ್ಲಿಸಬೇಕಾಗಿರುವುದಿಲ್ಲ.</td></tr>
</table>

**ಸಂಖ್ಯೆ**: ಮಮಇ 146 ಐಸಿಡಿ 2021

Halappa

**(ಆಚಾರ ಹಾಲಪ್ಪ ಬಸಪ್ಪ)**
ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು
ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು
ಹಿರಿಯ ನಾಗರಿಕರ ಸಬಲೀಕರಣ ಸಚಿವರು.

ಅನುಬಂಧ-. (ಪ್ರಶ್ನೆ ಸಂಖ್ಯೆ-1127/2021)

ತಾಯಿ ಕಾರ್ಡ್ ಗಳನ್ನು ಪಡೆದ ಫಲಾನುಭವಿಗಳ ಸಂಖ್ಯೆ

| Sl.no | District | 2017-January to 2017-March | 2017-18 | 2018-19 | 2019-20 | 2020-21 (till date:09-3-2021) |
|---|---|---|---|---|---|---|
| 1 | Bagalkote | 9,242 | 37,475 | 40,771 | 42,140 | 33,875 |
| 2 | Ballari | 11,287 | 48,374 | 64,021 | 60,757 | 55,991 |
| 3 | Belagavi | 3,986 | 14,778 | 97,662 | 94,868 | 78,040 |
| 4 | Bengaluru Rural | 14,718 | 1,12,387 | 13,779 | 14,990 | 13,030 |
| 5 | Bengaluru Urban | 27,255 | 1,13,025 | 2,16,395 | 1,46,534 | 1,18,855 |
| 6 | Bidar | 8,069 | 33,299 | 34,075 | 34,385 | 30,157 |
| 7 | Chamarajanagar | 2,384 | 12,333 | 11,453 | 11,412 | 10,037 |
| 8 | Chikkaballapur | 4,802 | 18,323 | 17,823 | 17,454 | 16,841 |
| 9 | Chikkamagaluru | 3,250 | 13,847 | 13,393 | 13,183 | 12,269 |
| 10 | Chitradurga | 6,710 | 27,298 | 30,296 | 27,526 | 25,558 |
| 11 | Dakshina Kannada | 8,056 | 29,737 | 28,855 | 28,511 | 24,792 |
| 12 | Davanagere | 7,790 | 32,536 | 24,919 | 25,344 | 22,137 |
| 13 | Dharwad | 8,129 | 34,988 | 35,362 | 33,757 | 28,242 |
| 14 | Gadag | 5,213 | 20,902 | 21,326 | 19,989 | 17,947 |
| 15 | Hassan | 5,549 | 22,117 | 21,969 | 22,450 | 21,656 |
| 16 | Haveri | 5,821 | 26,962 | 28,922 | 28,238 | 22,814 |
| 17 | Kalaburagi | 13,908 | 62,508 | 54,908 | 60,259 | 53,136 |
| 18 | Kodagu | 1,834 | 7,855 | 7,264 | 7,127 | 6,106 |
| 19 | Kolar | 5,350 | 21,293 | 20,997 | 22,572 | 20,740 |
| 20 | Koppal | 6,631 | 31,469 | 32,590 | 30,071 | 27,192 |
| 21 | Mandya | 5,259 | 21,775 | 20,803 | 22,198 | 21,394 |
| 22. | Mysuru | 9,119 | 38,008 | 35,487 | 38,319 | 33,914 |
| 23 | Raichur | 9,726 | 39,119 | 48,444 | 47,656 | 41,916 |
| 24 | Ramanagara | 3,944 | 14,032 | 12,079 | 13,939 | 12,947 |
| 25 | Shivamogga | 5,713 | 24,797 | 21,632 | 23,590 | 20,777 |
| 26 | Tumakuru | 8,933 | 34,835 | 36,633 | 36,063 | 33,872 |
| 27 | Udupi | 4,042 | 14,736 | 15,059 | 14,523 | 12,020 |
| 28 | Uttara Kannada | 5,297 | 20,865 | 19,351 | 19,366 | 15,714 |
| 29 | Vijayapura | 13,205 | 48,692 | 60,020 | 57,754 | 48,432 |
| 30 | Yadgir | 7,111 | 28,375 | 31,807 | 34,021 | 27,705 |
| | Karnataka | 2,32,333 | 10,06,740 | 11,18,095 | 10,48,996 | 9,08,106 |